ಆಯವ್ಯಯದಲ್ಲಿ ಮೇಲಿನ ಕಾಮಗಾರಿಗೆ ಅನುವು ಮಾಡಲಾಗಿದೆಯೆ?

ಹಾಗಿದ್ದಲ್ಲಿ ಮೇಲಿನ ಕಾಮಗಾರಿಯ ಈಗಿನ ಹಂತ ಮತ್ತು ಇದುವರೆವಿಗೆ1991-92ನೇ ಸಾಲಿನಲ್ಲಿ ಕಾಮಗಾರಿಯ ಮೇಲೆ ಖರ್ಚು ಮಾಡಿರುವ ವೆಚ್ಚವೇನು ?

ಹಾಗಿಲ್ಲದಿದ್ದಲ್ಲಿ ಹಣವನ್ನು ಒದಗಿಸದೇ ಇರಲು ಕಾರಣವೇನು? ಮತ್ತು ಸರ್ಕಾರವು ಮೇಲಿನ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಯಾವಾಗ ಕ್ರಮ ತೆಗೆದುಕೊಳ್ಳುವುದು?

ಶ್ರೀ ಜಿ.ಹೆಚ್.ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಈ ಕಾಮಗಾರಿಯನ್ನು 1991-92ನೇ ಸಾಲಿನ ಜಿಲ್ಲಾ ಪರಿಷತ್ತು ಆಯವ್ಯಯದಲ್ಲಿ ಸೇರಿಸಲಾಗಿತ್ತು. ಆದರೆ ಅನುದಾನದ ಕೊರತೆಯಿಂದ ಈ ಕಾಮಗಾರಿಗೆ ಸದರಿ ಸಾಲಿನಲ್ಲಿ ಅನುದಾನ ನೀಡಲಾಗಿಲ್ಲ.

ಮೇಲಿನ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಈಗಾಗಲೇ ತಿಳಿಸಿದಂತೆ 1991-92ನೇ ಸಾಲಿನಲ್ಲಿ ಅನುದಾನದ ಕೊರತೆಯಿಂದ ಈ ಕಾಮಗಾರಿಗೆ ಹಣ ಒದಗಿಸಲಾಗಲಿಲ್ಲ. ಆದರೆ 1992-93ನೇ ಸಾಲಿನ ಆಯವ್ಯಯದಲ್ಲಿ ಇದಕ್ಕೆ 3 ಲಕ್ಷ ರೂ.ಗಳ ಅನುದಾನ ಶುಭ ಹಾರೈಕೆಗೆ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶುಭಾ ಆರೈಕೆ

ಅಧ್ಯಕ್ಷರು:-ಮಾನ್ಯ ಸದಸ್ಯರುಗಳು ನನಗೊಂದು ನಿಮಿಷ ಅವಕಾಶ ಕೊಡಿ. ಇಂದು ಮಾನ್ಯ ಸಚಿವರಾದ ಎಸ್.ರಮೇಶ್‌ರವರ ಜನ್ಮ ದಿನ. ಅವರಿಗೆ ಸದನದ ಎಲ್ಲ ಸದಸ್ಯರುಗಳ ಪರವಾಗಿ ಹಾಗೂ ವೈಯಕ್ತಿಕವಾಗಿ ಶುಭವನ್ನು ಕೋರುತ್ತೇನೆ.

ಶ್ರೀ ಎಸ್.ರಮೇಶ್ :- ಧನ್ಯವಾದಗಳು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

1.ವಿಷಯ : ಪ್ರಶ್ನೆಗಳಿಗೆ ಉತ್ತರಗಳು ಬಾರದಿರುವ ಬಗ್ಗೆ.

ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕೆಇಚ್ಛೆಪಡುತ್ತೇವೆ. 1992ರಲ್ಲಿ ಕಳುಹಿಸಿರತಕ್ಕ ಪ್ರಶ್ನೆಗಳು ಲಿಸ್ಟ್‌ನಲ್ಲಿ ಬಂದಿವೆ. ಇವತ್ತಿನವರೆಗೂ ಕೂಡ ನನಗೆ ಉತ್ತರ ಬಂದಿಲ್ಲ. ಅದರ ಬಗ್ಗೆ ವಿವರ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು:- ತಾವು ನನಗೆ ವಿವರವನ್ನು ಬರೆದು ಕಳುಹಿಸಿ

ಶ್ರೀ ಸಿ.ಭೈರೇಗೌಡ:- ಹನ್ನೊಂದನೆಯ ಪಟ್ಟಿಯಲ್ಲಿರತಕ್ಕ ಒಂದು ಪ್ರಶ್ನೆ ಹದಿಮೂರನೆಯ, ಹದಿನಾಲ್ಕನೆಯ, ಹದಿನಾರನೆಯ, ಹದಿನೇಳನೆಯ ಮತ್ತು ಹದಿನೆಂಟು, ಹತ್ತೊಂಬತ್ತು ಈ ಪಟ್ಟಿಯಲ್ಲಿರತಕ್ಕ ಪ್ರಶ್ನೆಗಳು. ನಾನು 1992ನೇ ಇಸವಿಯ ಮಾತನಾಡುತ್ತಿದ್ದೇನೆ. ಈ ಅಧಿವೇಶನದಲ್ಲಿ ಕೊಟ್ಟಿರತಕ್ಕಪ್ರಶ್ನೆ. ಒಂಭತ್ತನೆಯ ಪಟ್ಟಿಯಲ್ಲಿರತಕ್ಕ ಪ್ರಶ್ನೆ ಇವುಗಳಿಗೆ ಉತ್ತರ ಇದುವರೆಗೆ ಕೂಡ ಬಂದಿಲ್ಲ. ಅದು ಲಿಸ್ಟೆಡ್ ದಿನಾಂಕ 6-3-92. ಅದೇ ರೀತಿ 9ನೆಯ ತಾರೀಖಿನಲ್ಲಿರತಕ್ಕ ಪ್ರಶ್ನೆ. 10ನೆಯ ತಾರೀಖಿನಲ್ಲಿರತಕ್ಕ ಪ್ರಶ್ನೆ. ಹದಿಮ್ಮೂರು, ಹದಿನೇಳು, ಇಪ್ಪತ್ತು, ಇಪ್ಪತ್ನಾಲ್ಕು ಈ ತಾರೀಖುಗಳಲ್ಲಿ ಬಂದಿರತಕ್ಕ ಪ್ರಶ್ನೆಗಳು.

ಅಧ್ಯಕ್ಷರು:- ತಾವು ಬರೆದು ಕಳುಹಿಸಿ ಕೊಡಿ.

ಶ್ರೀ ಸಿ.ಭೈರೇಗೌಡ:- ಕಳೆದ ಅಧಿವೇಶನದಲ್ಲೂ ನಾನು ತಮ್ಮ ಗಮನಕ್ಕೆ ತಂದಿದ್ದೆ. ತಾವು ತರಿಸಿಕೊಡತಕ್ಕಂಥ ಏರ್ಪಾಡನ್ನು ಸರ್ಕಾರ ಮಾಡುತ್ತದೆಎಂದು ಹೇಳಿದಿರಿ. ಆದರೆ ಕಳೆದ ಅಧಿವೇಶನದಲ್ಲೂ ಕೂಡ ಬಂದಿಲ್ಲ. ಈ ಅಧಿವೇಶನದಲ್ಲೂ ಕೂಡ ಬಂದಿಲ್ಲ. 13 ಪ್ರಶ್ನೆ ಗಳಲ್ಲಿ ಸುಮಾರು 7 ಪ್ರಶ್ನೆಗಳಿಗೆ ಇಲ್ಲಿಯವರೆಗೂ ಉತ್ತರ ಬಂದಿಲ್ಲ ಈಗಿನ ಅಧಿವೇಶನದಲ್ಲೂ ಕೂಡ ಸುಮಾರು 6 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ನಾವು ಪ್ರಶ್ನೆಗಳನ್ನು ಕಳಿಸಿರತಕ್ಕಂಥಾದ್ದು ಕೆಲವು ಜರೂರಾಗಿರುತ್ತವೆ, ಬಹಳ ಮಹತ್ವದ್ದಾಗಿರುತ್ತದೆ, ಸಾರ್ವಜನಿಕರ ಬದುಕಿಗೆ ಹತ್ತಿರದ ಸಂಬಂಧವಿರುವಂಥ'ದ್ದಾಗಿರುತ್ತದೆ. ಪಟ್ಟಿಯಲ್ಲಿ ಪ್ರಶ್ನೆ ಇರುತ್ತದೆ. ತಾವು ಪಟ್ಟಿಯಲ್ಲಿ ಸೇರಿಸಿದಮೇಲೂ ಕೂಡ ಉತ್ತರ ಕೊಡದಿದ್ದರೆ ಹೇಗೆ?

ಅಧ್ಯಕ್ಷರು :-ತಾವು ಬರೆದು ಕಳುಹಿಸಿಕೊಟ್ಟರೆ ನಾನು ಅದನ್ನು ವಿಚಾರಣೆ ಮಾಡುತ್ತೇನೆ. ಏಕೆ ಬರಲಿಲ್ಲ, ಬರದೇ ಇರುವುದಕ್ಕೆ ಏನು ಕಾರಣ ಎಂಬುದನ್ನು ನಾನು ನೋಡುತ್ತೇನೆ.

ಶ್ರೀ ಸಿ.ಭೈರೇಗೌಡ:- ತಾವು ಸರ್ಕಾರಕ್ಕೆ . . . .

ಅಧ್ಯಕ್ಷರು :- ನನಗೆ ಬರೆದು ಕಳಿಸಿ ಸ್ವಾಮಿ

ಶ್ರೀ ಸಿ. ಭೈರೇಗೌಡ:- ಎರಡು ಮೂರು ಸಾರಿ ತಮ್ಮ ಗಮನಕ್ಕೆ ನಾನು ತಂದಿದ್ದೇನೆ.

ಅಧ್ಯಕ್ಷರು:- ಇದಕ್ಕಿಂತ ಹೆಚ್ಚಿಗೆ ನಾನೇನೂ ಮಾಡುವುದಕ್ಕೆ ಬರುವುದಿಲ್ಲ. ನೀವು ಬರೆದು ಕಳಿಸಿದರೆ ಏಕೆ ಬರಲಿಲ್ಲ ಎಂದು ನಾನು ಅವರನ್ನು ಕೇಳುತ್ತೇನೆ. ನನ್ನ ಮನಸ್ಸನ್ನೂ ನಾನು ಅಪ್ಲೈ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-ಅವರು ಬರೆದು ಕಳಿಸಿದರೆ ಸಂಬಂಧಪಟ್ಟ ಇಲಾಖೆಗಳಿಂದ ಉತ್ತರ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ.ಭೈರೇಗೌಡ:- ಸರ್ಕಾರದ ಔದಾರ್ಯದಿಂದ ನಾವು ಇಲ್ಲಿ ಕೆಲಸ ಮಾಡುತ್ತಿದ್ದೇವೆಯೇ?

Mr.SPEAKER :- There will be no anxiety about it.

2. ಪ್ರೌಢಶಾಲಾ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡಿರುವ ಬಗ್ಗೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಎಂಟನೇ, ಒಂಭತ್ತನೇ ತರಗತಿಯ ಪ್ರೌಢಶಾಲಾ ಪರೀಕ್ಷೆಗಳು ನಡೆಯುತ್ತಿವೆ. ಪ್ರತಿನಿತ್ಯ ಪ್ರಶ್ನೆ ಪತ್ರಿಕೆಗಳು ಹೊರಗೆ ಬರುತ್ತಾ ಇವೆ. ಶಿವಮೊಗ್ಗದಲ್ಲಿ ಎಲ್ಲ ಪತ್ರಿಕೆಗಳು ಕೂಡ ಲೀಕ್ ಆಗುತ್ತಾ ಇವೆ. ಒಂದು ಪ್ರಶ್ನೆ ಪತ್ರಿಕೆಗೆ 50 ರೂಪಾಯಿನಂತೆ ಮಾರಾಟವಾಗುತ್ತಿವೆ. ಈ ರೀತಿ ದೋಸೆ, ಕಡಲೆಕಾಯಿ ರೀತಿಯಲ್ಲಿ ಪ್ರಶ್ನೆ ಪತ್ರಿಕೆಗಳು ಹೊರಗೆ ಬರುತ್ತಾ ಇದ್ದು ಡಿ.ಡಿ.ಪಿ.ಐ. ಹತ್ತಿರ ನಿನ್ನೆ ನಾನು ಹೋಗಿ ವಿಚಾರಿಸಿದರೆ ಅವರು ಒಪ್ಪಿಕೊಂಡರು. ನಾನೇನು ಮಾಡಲಿ, ಇವು ಎಲ್ಲಿಂದ ಹೋಗುತ್ತವೆ ಎಂದು ಗೊತ್ತಾಗುತ್ತಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಸಂಬಂಧಪಟ್ಟ ಪತ್ರಿಕೆಯವರು ಹೋಗಿ ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಕಂಪ್ಲೇಂಟ್ ಕೊಟ್ಟಿದ್ದಾರೆ.

ಅಧ್ಯಕ್ಷರು:- ಬರೆದು ಕಳಿಸಿಕೊಡಿ. ಸಂಬಂಧಪಟ್ಟ ಸಚಿವರಿಗೆ ಕಳಿಸಿಕೊಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ :-ಇದು ಒಂದೇ ಅಲ್ಲ, ಇಂಜನಿಯರಿಂಗ್ ಕಾಲೇಜಿನಲ್ಲಿ ಆಗಿದೆ, ಕುವೆಂಪು ಯೂನಿವರ್ಸಿಟಿಯಲ್ಲಿ ಆಗಿದೆ. ಒಂದೇ ದಿನ ನಾಲ್ಕು ಸೆಂಟರ್‌ಗಳಲ್ಲಿ ಲೀಕ್ ಆಗಿದ್ದು ನನ್ನ ಹತ್ತಿರ ಎರಡು ಪ್ರಶ್ನೆ ಪತ್ರಿಕೆಗಳು ಇವೆ. ಒಂದನೇಯದ್ದು ಪ್ರಿಂಟೆಡ್ ಪೇಪರ್. ಕುವೆಂಪು ಯೂನಿವರ್ಸಿಟಿಯ ಒಂದನೇ ಮತ್ತು ಎರಡನೇ ಸೆಮಿಸ್ಟರ್‌ದ್ದು.